IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಪಂಪನ ಮಹಾ ಕಾವ್ಯದ ಕರ್ಣ

ಡಾ.ವಿಜಯಮಾಲಾ ನಾಗನೂರಿ.
ಉಪನ್ಯಾಸಕರು ಕನ್ನಡ
ಎಸ್ ಎಸ್.ಕಲಾ ಹಾಗೂಈ ಪಟ್ಟಣ ಪಂಚಾಯತ ವಿಜ್ಞಾನ ಮಹಾವಿದ್ಯಾಲಯ ಸಂಕೇಶ್ವರ.

ಕನ್ನಡ ಸಾಹಿತ್ಯವು ಎರಡು ಸಾವಿರ ವರ್ಷಗಳ ದೀರ್ಘ ಇತಿಹಾಸವನ್ನು ಹೊಂದಿ ಸಮೃದ್ಧವಾಗಿ ಬೆಳೆಯುತ್ತದೆ. ಸಾಹಿತ್ಯ ಒಂದು ಜೀವಂತ ಪ್ರಕ್ರಿಯೆ ಕನ್ನಡ ಸಾಹಿತ್ಯ ಮನುಷ್ಯ ಜೀವನದ ಪ್ರತಿಬಿಂಬವಾಗಿದೆ. "ಕಾವ್ಯವು" ಸಾಹಿತ್ಯದ ಒಂದು ಪ್ರಕಾರವಾಗಿ ದೀರ್ಘ ಚರಿತ್ರೆಯನ್ನು ಹೊಂದಿದೆ. ರಾಮಾಯಣ ಮಹಾಭಾರತದಂತಹ ಮಹಾಕಾವ್ಯಗಳು ಕಾವ್ಯದ ಶಿಖರಗಳಾಗಿವೆ. ಮಹಾಕಾವ್ಯ ಕಾವ್ಯ ಕ್ಷೇತ್ರದಲ್ಲಿ ಒಂದು ಪ್ರವಾಹವನ್ನು ಎಬ್ಬಿಸಿ ಬಿಟ್ಟಿದೆ. ವ್ಯಾಸ ಕವಿಯ ಮಹಾಭಾರತದ ನಂತರ ಆದಿ ಕವಿ ಪಂಪನ ಲೌಕಿಕ ಕಾವ್ಯವನ್ನು ಬರೆದು ಅದನ್ನು ಪಂಪಭಾರತ, ವಿಕ್ರಮಾರ್ಜುನ ವಿಜಯ ಎಂಬ ಹೆಸರಿನಿಂದ ಮಹಾಕಾವ್ಯವನ್ನು ಬರೆದ ಶ್ರೇಯಸ್ಸು ಪಂಪನಿಗೆ ಸಲ್ಲುತ್ತದೆ. ಮಹಾಭಾರತದ ಕಾವ್ಯವನ್ನು ರಚಿಸಬೇಕಾದರೆ, ಎಲ್ಲ ಪಂಡಿತರು ಪಂಪನೇ ರಚಿಸಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕನ್ನಡ ಸಾಹಿತ್ಯವು ಸಾವಿರಾರು ವರ್ಷಗಳಿಂದ ಬೆಳೆದುಕೊಂಡು ಬಲ್ತಾಯಿದೆ. ಕನ್ನಡ ಸಾಹಿತ್ಯವು ಮನುಷ್ಯ ಜೀವನದ ಪ್ರತಿಬಿಂಬವಾಗಿದೆ. 10 ನೇ ಶತಮಾನದಲ್ಲಿ ಪ್ರಾಚೀನ ಕನ್ನಡ ಸಾಹಿತ್ಯ ತುಂಬಾ ಪ್ರಖರವಾಗಿ ಮೂಡಿತು. ವ್ಯಾಸ ಕವಿಯ ಮಹಾಭಾರತದ ನಂತರ ಆದಿ ಕವಿ ಎನಿಸಿಕೊಂಡಿರುವ ಪಂಪ ಎರಡು ಮಹಾಕಾವ್ಯಗಳನ್ನು ಬರೆಯುವುದರ ಮೂಲಕ **'ಬೆಳಗುವೆನಿಲ್ಲಿ ಲೌಕಿಕಮನ್ ಅಲ್ಲಿ ಜಿನಾಗಮಮಂ'** ಎಂದಿದ್ದಾನೆ. ಆ ಕಾಲಘಟ್ಟವನ್ನು 'ಪಂಪಯುಗ' ಎಂದೇ ಕರೆದಿರುವರು. ಪಂಪನನ್ನು ಸಾಹಿತ್ಯ ಲೋಕದ ಯುಗ ಪ್ರವರ್ತಕನೆಂದು ಸಂಬೋಧಿಸಿದ್ದು ಸೂಕ್ತವೆನಿಸುತ್ತದೆ. **'ಮನುಷ್ಯ ಜಾತಿ ತಾನೊಂದೆ ವಲಂ'** ಎಂದು ಘಂಟಾಘೋಷವಾಗಿ ಸಾರಿ ***ರತ್ನತ್ರಯರಲ್ಲಿ ಮೊದಲಿಗನೆನಿಸಿದ ಪಂಪನ*** ಈ ಮಾತು ಮಾನವೀಯತೆಗೆ ಹಿಡಿದ ಕನ್ನಡಿಯಾಗಿದೆ. ಮಾನವೀಯತೆ ಎಂಬುದು ಎಲ್ಲ ಜಾತಿ, ಧರ್ಮ, ಬಣ್ಣ ವರ್ಗದಂತಹ ಭೇದಗಳನ್ನು ಹೊಸಕಿ ಹಾಕಿ ಮೇಲೆ ಬರಬೇಕಾಗಿದೆ.

"ಮಾನವತಾವಾದ, ಮನುಷ್ಯತ್ವ, ಮಾನವೀಯ ಮೀಡಿತ, ಮನುಷ್ಯ ಶಕ್ತಿ ಸಾಮರ್ಥ್ಯದಲ್ಲಿ ,ಅಂತಶಕ್ತಿಯಲ್ಲಿ ಮತ್ತು ಕರಣದಲ್ಲಿ ಮನುಷ್ಯರು ಇಟ್ಟಿರುವ ವಿಶ್ವಾಸ ಪ್ರೀತಿಗೆ ಸಂಕೇತವಾಗಿದೆ. ಮನುಷ್ಯರ ಆಸಕ್ತಿ ಮನುಷ್ಯರೇ, ಎಂಬುದು ಮಾನವತಾವಾದದ ಧ್ಯೇಯವಾಗಿದೆ."

**'ಪಸರಿಪಕನ್ನಡಕ್ಕೊಡೆಯನೋರ್ವನೆ ಸತ್ಕವಿ ಪಂಪನಾವಗಂ'**ಎಂಬ ಪ್ರಶಂಸೆಗೆ ಪಾತ್ರನಾಗಿ 'ಕವಿತಾಗುಣಾರ್ಣವ' ಎಂಬ ಬಿರುದು ಹೊತ್ತ ಪ್ರತಿಭಾ ಸಂಪನ್ನ ಎನಿಸಿಕೊಂಡ ಕವಿ ಪಂಪ.

" ವ್ಯಾಸಮುನೀಂದ್ರ ರುಂದ್ರ ವಚನಾಮೃತವಾರ್ಧಿಯನೀಸುವೆಂ ಕವಿ
ವ್ಯಾಸನೆನೆಂಬ ಗರ್ವಮೆನಗಿಲ್ಲ ಗುಣಾರ್ಣವನೊಳ್ಪು ಮನ್ಮನೋ ।
ವಾಸಮನೆಯ್ದೆ ಪೇೞ್ದಪೆನದಲ್ಲದೆ ಗರ್ವಮೆ ದೋಷಮಟ್ಟಿಗಂ
ದೋಷಮೆ ಕಾಣೆನೆನ್ನಜೆವ ಮಾೞ್ಕೆಯೆ ಪೇೞ್ವೊಡಿದಾವ ದೋಷಮೋ ॥

ನಾನು ವ್ಯಾಸಮರ್ಹಷಿಗಳ ವಿಸ್ತಾರವಾದ ಕಾವ್ಯವೆಂಬ ಅಮೃತ ಸಾಗರವನ್ನು ಈಜುತ್ತೇನೆ. ಆದರೆ ಕವಿ ವ್ಯಾಸನೆಂಬಗರ್ವ ಮಾತ್ರ ನನಗಿಲ್ಲ ಎಂಬವಲ್ಲಿ ಮಾನವೀಯತೆ ಮಿಡಿತವನ್ನು ಕಾಣುತ್ತೇವೆ. ತನ್ನ ವ್ಯಕ್ತಿತ್ವ ಎಂಥಹದ್ದು ಎಂದು ಕವಿ ಸಮರ್ಥಿಸಿಕೊಂಡಿದ್ದಾನೆ. ಮನುಷ್ಯನ ಸಂವೇದನಾ ಕ್ಷೇತ್ರದ ಬಹುಪಾಲನ್ನು ಕಾವ್ಯದಲ್ಲಿ ವ್ಯಕ್ತಡಿಸುವ ಸಾಹಸವನ್ನು ಪಂಪ ಮಾಡಿದ್ದಾನೆ. ಆ ಕಾರಣ ಕಾವ್ಯ ಜನಾದರಣೀಯವಾಗಿದೆ. ಗುಣಾರ್ಣವನಾದ ಅರಿಕೇಸರಿಯ ಸತ್ಸ್ವಭಾವವು ನನ್ನ ಮನೋಮಂದಿರವನ್ನು ಪ್ರವೇಶಿಸಿರುವುದರಿಂದ ಈ ಕಾವ್ಯವನ್ನು ಹೇಳುತ್ತಿದ್ದೇನೆ. ಈ ರೀತಿಯಾದ ಪ್ರೀತಿಪ್ರದರ್ಶನವು ದೋಷವಾಗುತ್ತದೆಯೇ? ನನಗೆ ತಿಳಿದಷ್ಟು ನಾನು ಹೇಳುತ್ತೇನೆ. ಇದರಲ್ಲಿ ಯಾವ ದೋಷವಿದೆ? ಎನ್ನುವಲ್ಲಿ ಸ್ವಅಹಂಕಾರ ಖಂಡನೆಯನ್ನು ಮಾಡಿಕೊಂಡಿದ್ದಾನೆ.

ಮಹರ್ಷಿ ವ್ಯಾಸರ ವಚನ ಸಮುದ್ರವನ್ನು ಮಹಾಭಾರತದವನ್ನು ಈಜಿ ದಾಟುತ್ತೇನೆ. ನಾನೂ ಒಬ್ಬ ವ್ಯಾಸನೇ ಎನ್ನುವ ಗರ್ವ ಎನಗಿಲ್ಲ. ಎಂದು ತನ್ನ ವ್ಯಕ್ತಿತ್ವವನ್ನು ಮೇಲಿನ ಕವಿತೆಯಲ್ಲಿ ಸಮರ್ಥಿಸಕೊಂಡಿದ್ದಾನೆ. ಕನ್ನಡ ಸಾಹಿತ್ಯವನ್ನು ಅವಲೋಕಿಸಿದರೆ ಹಿರಿಯ ಕವಿಗೆಳೆಲ್ಲರ ಧರ್ಮ, ಕಾವ್ಯ ಧರ್ಮಗಳು ಅವರು ಗುರಿಯಾಗಿತ್ತು. ಎಲ್ಲರಲ್ಲಿ ಪಂಪ ಮೊದಲಿಗನಾಗಿ ಕಂಡು ಬರುತ್ತಾನೆ.

ಆದಿಪುರಾಣವನ್ನು ಬರೆದ ಪಂಪನನ್ನು ಅರಿಕೇಸರಿ ಗುರುತಿಸಿ ಕರೆದು ತನ್ನ ಅರಮನೆಗೆ ಕರೆದು ರಾಜಶ್ರಯವನ್ನು ನೀಡಿದನು. ಆ ಸಂಧರ್ಭದಲ್ಲಿ ಅಂದರೆ ಕ್ರಿ.ಶ. 942 ರಲ್ಲಿ ಕೇವಲ ಆರು ತಿಂಗಳಲ್ಲಿ ಪಂಪ ಅರಿಕೇಸರಿ ರಾಜನನ್ನು ಅರ್ಜುನನಿಗೆ ಸಮೀಕರಿಸಿ ಪಂಪ ಭಾರತವನ್ನು ಬರೆದನು. ಅರಿಕೇಸರಿಗೆ "ಗುಣಾರ್ಣವ" ಎಂಬ ಬಿರುದಿತ್ತು. ಅದಕ್ಕನುಗುಣವಾಗಿ ಪಂಪನಿಗೆ "ಕವಿತಾ ಗುಣಾರ್ಣವ" ಎಂಬ ಬಿರುದು ಸಿಕ್ಕಿತು.

"ಪಂಪ ಕರ್ಣನ ಕುರಿತು ಆಡಿದ ಕೆಲವು ಮಾತುಗಳನ್ನು ಗಮನಿಸಬೇಕು ಪಂಪ ಕರ್ಣನ ಪಾತ್ರ ಪ್ರತಿಯೊಂದು ಘಟ್ಟಘಟ್ಟಲೂ ಉನ್ನತಿಕೆ, ಔದರ್ಯಗಳನ್ನೇ ಮೆರೆದ್ದಿದ್ದಾನೆ. ಕರ್ಣನ ನಿಜವಾದ ಗುಣೌತಿಯನ್ನು ಕವಿ ನಿರ್ದುಷ್ಟ ಮನದಿಂದ ಒಪ್ಪಿಕೊಂಡಿದ್ದಾನೆ".

ಚಂ॥ ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರೆ ಕರ್ಣನೇಱು ಕ ।
ರ್ಣನ ಕಡು ನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ ॥ ॥
ವ॥ ಅಂತು ರಿಪುಕುರಂಗಕಂಠೀರವನ ಕೆಯ್ಯೊಳ್ ವೈಕರ್ತನಂ ಸಾಯಲೊಡಂ
ಮೇಲುದಂ ಬೀಸಿ ಬೊಬ್ಬಿಱಿದಾರ್ವ ಪಾಂಡವಪತಾಕಿನಿಯೊಳ್–

ಮೇಲಿನ ಪದ್ಯದಲ್ಲಿ ಕರ್ಣನ ಶೌರ್ಯವನ್ನು ಉನ್ನತಗೊಳಿಸುವ ಬಗೆ ಅದ್ಭುತಗೊಂಡಿದೆ. ಆತನಲ್ಲಿ ಹದುಗಿರುವ ಗುಣ ಸ್ವಭಾವಗಳಿಗೆ ಮನುಷ್ಯತ್ವ ಮಾರುಹೋಗುವ ಹಾಗೆ ಕಂಡು ಬರುತ್ತದೆ. ಪಾಂಡವರು ಐದು ಒಬ್ಬಳು ಕುಂತಿ ಆರು ಅಂದರೆ ಯಾರನ್ನು ಎನ್ನುವ ವಿಶೇಷ ಅರ್ಥವಿದೆ. ಕರ್ಣನಿಗೆ ಸರಿದೊರೆ ಭಾರತ ಕಾವ್ಯದಲ್ಲಿ ಯಾರಾದರೂ ಇದ್ದಾರಯೇ? ಆತನ ಸತ್ಯದ, ತ್ಯಾಗದ ಗುಣಗಳಿಂದ ಭಾರತ ಕಾವ್ಯವು ಕರ್ಣರಸಾಯನವಾಗಿದೆ. ಕಾವ್ಯದ ರಸಗಳಲ್ಲಿ ಕರ್ಣ ರಸವೊಂದು ಹುಟ್ಟಿಕೊಂಡಿರುವುದು ಅದು ಪಂಪನಿಂದಲೆ. ಮಹಾದಾನಿಯಾದ ಕರ್ಣನನ್ನು ನೆನೆಯುವುದೆಂದರೆ ಮಾನವರು ಮನುಷ್ಯತ್ವವನ್ನು ಎಚ್ಚರಿಸಿಕೊಂಡಂತೆಯೇ. ಹೀಗಾಗಿ ಕಾವ್ಯ ಮಧುರವಾಗಿದೆ. ಕಾವ್ಯದಲ್ಲಿಯೇ ಒಂದು ಅತಿ ಮುಖ್ಯ ಪಾತ್ರವಾಗಿ ಕರ್ಣನ ಬಗ್ಗೆ ಚರಮ ಗೀತೆಯನ್ನು ಹಾಡಿ ಪಂಪ ಕರ್ಣನಿಗೆ ಗೌರವ ಸಲ್ಲಿಸಿದ ರೀತಿ ವಿಶಿಷ್ಟವಾಗಿದೆ

ಭಾರತ ಕಾವ್ಯದಲ್ಲಿ ಪಂಪ ಚಿತ್ರಿಸಿದ ಪ್ರತಿಯೊಂದು ಪಾತ್ರಗಳಲ್ಲಿಯೂ ಮೌಲ್ಯಗಳನ್ನು ತುಂಬಿ ಕಾವ್ಯಕ್ಕೆ ಲೋಕಪೂಜೆ ಸಲ್ಲುವಂತೆ ವಿವರಿಸಿದ್ದಾನೆ. ಪಂಪನ ಕಾವ್ಯದಲ್ಲಿ ಬರುವ ಪಾತ್ರಗಳು ಬಹಳ ವಿಶಿಷ್ಟವಾದವೂ ಮನುಷ್ಯತ್ವ, ದೈವತ್ವದ ಗುಣಗಳಿಂದ ಮೆರೆಯುತ್ತಿವೆ. ಎಲ್ಲದರಲ್ಲಿಯೂ ಕರ್ಣನ ಹಾಗೂ ದುರ್ಯೋಧನನ ಪಾತ್ರಗಳು ದುರಂತತೆಯನ್ನು ಅನುಭವಿಸಿವೆ. ಪ್ರತಿಯೊಂದು ಪಾತ್ರಗಳನ್ನು ವರ್ಣಿಸುವ ಭಾರತದ ಒಂದು ಪದ್ಯ ನೋಡಿದರೆ ತಿಳಿಯುತ್ತದೆ.

" ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್

ಭೀಮಸೇನಂ

ಬಲದೊಳ್ ಮದ್ರೇಶನತ್ಯುನ್ನತಿಯೊಳಮರಸಿಂಧೂದ್ಭವಂ ಚಾಪವಿದ್ಯಾ ।
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ
ಧರ್ಮದೊಳ್ ನಿ
ರ್ಮಲ ಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತಂ ಲೋಕಪೂಜ್ಯಂ ॥ 64 ॥

ಚಲದಲ್ಲಿ ದುರ್ಯೋಧನನೂ, ಸತ್ಯದಲ್ಲಿ ಕರ್ಣನೂ, ಪೌರುಷದಲ್ಲಿ ಭೀಮಸೇನನೂ, ಬಲದಲ್ಲಿ ಶಲ್ಯನೂ, ಗುಣೌನ್ನತಿಯಲ್ಲಿ ಭೀಷ್ಮನೂ, ಚಾಪವಿದ್ಯಾಕೌಶಲದಲ್ಲಿ ದ್ರೋಣಾಚಾರ್ಯನೂ ಸಾಹಸದ ಮಹಿಮೆಯಲ್ಲಿ ಅರ್ಜುನನೂ ,ಧರ್ಮದಲ್ಲಿ ಪರಿಶುದ್ಧಮನಸ್ಸುಳ್ಳ ಧರ್ಮರಾಯನೂ ಶ್ರೇಷ್ಠರಾದವರು. ಇವರಿಂದ ಭಾರತವು ಲೋಕಪೂಜ್ಯವಾಗಿದೆ ಹಾಗೂ ಸಮಸ್ತ ಭಾರತವೆಂದು ಹೆಸರನ್ನು ಪಡೆದುಕೊಂಡಿದೆ. ಇದೊಂದು ಲೌಕಿಕ ಕಾವ್ಯವಾಗಿರುವುದರಿಂದಲೇ ಪಾತ್ರಗಳು ವಿಶಿಷ್ಟವಾಗಿವೆ. ಕರ್ಣ ಹುಟ್ಟಿನಿಂದ ಹಿಡಿದು ಸಾಯುವವರೆಗೆ ಶೂದ್ರತ್ವವನ್ನು, ದುಖ:ವನ್ನು ಹಾಗೂ ಅನಾಥ ಪ್ರಜ್ಞೆಯನ್ನು ಅನುಭವಿಸುವ ಪಾತ್ರವಾಗಿ ಕಂಡು ಬರುತ್ತಾನೆ. ಕರ್ಣ ಸಾಹಸದ, ತ್ಯಾಗದ, ಸತ್ಯದ ಶೌರ್ಯದ ಶೀಲ, ಜಸ,ಚಾಗ,ವಿನಯತೆ ಎಲ್ಲದರಲ್ಲಿಯೂ ಕರ್ಣ ಆದರ್ಶ ವ್ಯಕ್ತಿತ್ವವನ್ನು ಕಂಡುಕೊಂಡ ಪಂಪ ಈ ಗುಣಗಳಿಗೆ ಮಾರಿಹೋಗಿದ್ದಾನೆ. ಇವೆಲ್ಲವು ಮಾನವೀಯತೆಗೆ ದೃಷ್ಟಾಂತವೆನಿಸಿವೆ. ಯಾವುದೇ ಆಶೆ ಆಮಿಷೆಗಳಿಗೆ ಬಲಿಯಾಗದೆ ತನ್ನ ಉದಾರ ಚಾರಿತ್ರ್ಯವನ್ನು ಕಾಯ್ದುಕೊಂಡು ಬಂದಾತ ಕರ್ಣ. "ನನ್ನಿ ಎಂದರೆ ಕೃತಜ್ಞತಾ ಭಾವ. ಕವಿಗೆ ಬಹುಶ: ಆತನ ದಾನ ಗುಣಕ್ಕಿಂತ ನನ್ನಿ ಗುಣವೇ ಹೆಚ್ಚು ಮನಬಂದಂತಿದೆ. ಅಂತೆಯೇ ಆತ ನನ್ನಿಯ ಈ ಮೌಲ್ಯವನ್ನು ಕರ್ಣನಿಗೆ ಅಂಟಿಸಿದ್ದಾನೆ."3

"ಚಲಮುಂ ಚಾಗಮುಮಳವುಂ
ಕಲಿತನಮುಂ ಕುಲಮುಮೀಗಳೆನ್ನಯ ಮೆಯ್ಯೊಳ್ ।
ನೆಲಸಿದುವು ನಿಮ್ಮ ಕರುಣಾ
ಬಲದಿಂ ನೀವೆನ್ನನಿಂದು ಮಗನೆಂದುದಜೆಂ ॥ 80 ॥

ನೀವು ತಮ್ಮ ಕರುಣೆಯ ಬಲದಿಂದ ಈಗ ನನ್ನನ್ನು ಮಗನೆಂದು ಹೇಳಿದುದರಿಂದ ನನಗೆ ಛಲವೂ ತ್ಯಾಗವೂ ಮೇಲ್ಮೆಯೂ ಪರಾಕ್ರಮವೂ ಕುಲವೂ ನನ್ನ ಶರೀರದಲ್ಲಿ ನೆಲಸಿದುವು. ಕರ್ಣನ ಈ ಮಾತುಗಳಲ್ಲಿ ಮಾನವೀಯತೆಯ ದಿವ್ಯ ಅಭಿವ್ಯಕ್ತಿಯನ್ನು ಕಾಣಬಹುದಾಗಿದೆ. ಸದ್ಗುಣಗಳನ್ನು ಹೊಂದಿರುವ ಸಾಕಾರ ಮೂರ್ತಿಯಾಗಿ ಒಬ್ಬ ಸಾತ್ವಿಕ ಸ್ವಭಾವದ ವ್ಯಕ್ತಿ ಜನರಿಗೆ ಮಾದರಿಯಾಗಿದಾನೆ. ಜಗತ್ತಿನ ಯಾವುದೇ ವ್ಯಕ್ತಿ ತನ್ನ ಹೆತ್ತ ಮಗು ಬೆಳೆದು ಅವನ ಮಧ್ಯಮ ವಯಸ್ಸಿಗೆ ಬಂದನಂತರ ಅವನ ಎದುರಿಗೆ ಎಂದು ಜೀವನದಲ್ಲಿ ಕಂಡು ಬರದ ತಾಯಿ ಬೆಳೆದ ಮಗನ ಮುಖಾಮುಖಿಯಾಗುವ ಪ್ರಸಂಗ ಯಾವುದೇ ವ್ಯಕ್ತಿಯನ್ನು ಕೂಡಾ ಹೃದಯವಿದ್ರಾವಕವಾಗಿಸುತ್ತದೆ. ಜೊತೆಗೆ ತಾಯಿಯ ಮೇಲೆ ಕುಪಿತನಾಗಬಹುದು, ಆದರೆ ಕರ್ಣ ತಾಯಿಯ ಮೇಲೆ ಯಾವುದೇ ಸಿಟ್ಟನ್ನು ಹೊಂದದೇ ಅವಳನ್ನು ಪ್ರೀತಿ ಗೌರವದಿಂದ ತಾಯಿಯೆಂದು ಸ್ವೀಕರಿಸುವ ಮೂಲಕ ಸಯಮವನ್ನು ಮೀರಿದ್ದಾನೆ. ಕುಂತಿ ತನ್ನ ಮಗನ ಎದುರಿಗೆ ಮಗನೇ ಎಂದು ಸಂಭೋಧಿಸಿದ ಕೂಡಲೇ ಶರೀರದಲ್ಲಿ ಚಲ,ತ್ಯಾಗ, ಪರಾಕ್ರಮ ,ಶೌರ್ಯದ ಗುಣಗಳು ಬಂದವು ಎಂದು ಹೇಳುವ ಪರಿ ಮಾನವೀಯ ಮೌಲ್ಯಗಳ ಪ್ರತೀಕವಾಗಿವೆ.

ಈ ಪತ್ರಿಕೆಯಲ್ಲಿ ನಾವು ಕರ್ಣನ ಕುರಿತಾಗಿ ಮಾತ್ರ ಚರ್ಚಿಸುವು ಉದ್ದೇಶವನ್ನು ಹೊಂದಿದ್ದೇವೆ. ಕಾರಣ ಕರ್ಣನ ಪಾತ್ರ ಒಂದು ದುರಂತ ಪಾತ್ರವಾಗಿ ಪಂಪಭಾರತದಲ್ಲಿ ಕರ್ಣನ ಹುಟ್ಟಿನಿಂದ ಹಿಡಿದು ಸಾಯುವವರೆಗೂ ಶೂದ್ರತ್ವವನ್ನು ದುಃಖವನ್ನು ಹಾಗೂ ಅನಾಥ ಪ್ರಜ್ಞೆಯನ್ನು ಅನುಭವಿಸುವ ಪಾತ್ರವಾಗಿ ಕಂಡು ಬರುತ್ತದೆ. ದಾನಶೂರ ಕರ್ಣನೆಂದು ಬಿರುದನ್ನು ಪಡೆದ ಕರ್ಣ, ಸಾಹಸದ, ತ್ಯಾಗದ ಸತ್ಯದ ಶೌರ್ಯದ ವ್ಯಕ್ತಿಯಾಗಿ ಕಂಡು ಬರುತ್ತಾನೆ. ಅಂತೆಯೇ ಮಹಾದಾನಿ, ಕಾರುಣ್ಯಗಂಗೆಯ ಗುಣಗಳಿಂದ ಪಂಪ ಕವಿ ಕರ್ಣನ ಪಾತ್ರವನ್ನು ಬಹಳ ಸೊಗಸಾಗಿ ವಿವರಿಸಿರುವನು.

"ನನ್ನಿಯೊಳಿನಿಯತನಮಂ

ಎಂಬುದು ಅರ್ಥವು ಸತ್ಯದಲ್ಲಿ ಕರ್ಣನನ್ನು ನೆನೆಯಿರಿ ಎಂದು ಸಾರಿದಂತಿದೆ. ಜೊತೆಗೆ ಪರಿಹಿತಾರ್ಥಕ್ಕಾಗಿಯೇ ಕರ್ಣನು ಜಿವ ಎತ್ತಿದಂತಿದೆ. ಕುಂತಿ ದುರ್ವಾಸ ಮುನಿಗಳ ಮಂತ್ರಗಳ ವರದಿಂದ ಮೊದಲನೇ ಮಂತ್ರದಿಂದ ರವಿ ಸಹಾಯದಿಂದ ಕರ್ಣನನ್ನು ಪಡೆದು ನಂತರ ಆ ಹಸಿಗೂಸನ್ನು ಗಂಗಾತೀರದಲ್ಲಿ ತೇಲಿಬಿಟ್ಟು, ಹೊರಟು ಹೊದಳು, ಅಂದಿನಿಂದ ಕರ್ಣನ ಜೀವನದಲ್ಲಿ ಅನಾಥ ಪ್ರಜ್ಞೆಯು ಸುರುವಾಯಿತು. ನಂತರ ಯಾವುದೋ ಬೆಸ್ತರ ಮನೆಯಲ್ಲಿ, ಬೆಳೆದು ಅಲ್ಲಿ ಶೂದ್ರತ್ವವನ್ನು ಅನುಭವಿಸತೊಡಗಿದೆ, ಶೂದ್ರರ ಮನೆಯಲ್ಲಿ ಹುಟ್ಟಿದರೂ ಕರ್ಣನು ಗುಣಗಳಿಂದ ಬಹಳ ಶ್ರೀಮಂತನಾಗಿ ಮಾನವೀಯತೆಯ ಸಾಕಾರ ಮೂರ್ತಿಯಾಗಿ ಕಂಡು ಬರುತ್ತಾನೆ. ಬೆಳೆದ ಮೇಲೆ ವಿದ್ಯೆಯನ್ನು ಕಲಿಯಲು ಹೋದಗಲೂ ಜಾತಿಯ ಕಾರಣವಾಗಿ ಗುರುಗಳಿಂದ ಶಾಪಗ್ರಸ್ಥನಾದದ್ದು, ಜೀವನದಲ್ಲಿ ಸ್ವತಃ ಜಾತಿಯನ್ನು ತಿಳಿಯದೇ ಶಾಪದಿಂದ ಬಳಲುತ್ತಾನೆ. ಇದೊಂದು ದೊಡ್ಡ ದುರಂತವೇ ಸರಿ.

ಕೃಷ್ಣನು ಕರ್ಣನ ಜನ್ಮರಹಸ್ಯ ಹೇಳಿದ ಕೂಡಲೇ ದುರ್ಯೋಧನನ ಉಪಕಾರಕ್ಕೆ ಅಪಕಾರವನ್ನೆಸಗಿ ಪಾಂಡವರೊಡನೆ ಸೇರಿಕೊಂಡರೆ ಜನ ಮೆಚ್ಚರು ಎಂಬಂತೆ ಕರ್ಣನು ತನ್ನ ನಿರ್ಧಾರವನ್ನೇನೋ ಕೃಷ್ಣನಿಗೆ. ಹೇಳಿದ ಕೃಷ್ಣನ ಉದ್ದೇಶ ಪೂರ್ತಿಯಾಯಿತು. ಕರ್ಣನ ಹೃದಯ ಮನಸ್ಸನ್ನು ಭೇದಿಸಿದ ದುಯೋಧನ–ಕರ್ಣನ ಸ್ನೇಹದಲ್ಲಿ ಒಡಕನ್ನುಂಟು ಮೂಡಿಸಿದ ಕೃಷ್ಣನ ಮಾತುಗಳನ್ನು ಕೇಳಿ ಕರ್ಣ ಮಾನಸಿಕವಾಗಿ ಕುಗ್ಗಿ ಹೋಗಿ ಬಸವಳಿದನು. ಸೋದರ ಸಂಬಂಧ ಪ್ರೀತಿ ಒಂದು ಕಡೆ ಇನ್ನೊಂದು ಕಡೆ ಸ್ನೇಹ ಎರಡರ ನಡುವೆ. ಸಿಲುಕಿದ ಕರ್ಣನ ಮನಸ್ಥಿತಿ ಅಡಕತ್ತರಿಯ ನಡುವೆ ಸಿಲುಕಿದ ಅಡಕೆ ತರವಾಗಿದೆ. ತರವಾಗಿದೆ. ಮಾನಸಿಕಯಾತನೆ ಪಡುತ್ತಾ. ದೀರ್ಘ ಗಂಭೀರ ಚಿಂತೆಯಲ್ಲಿ ಮುಳಗಿಸಿದ ಸ್ಥಿತಿಯಂತೂ ಓದುಗರ ಮನ ಮಿಡಿಯುವಂತದ್ದಾಗಿದೆ.

ಈ ರೀತಿ ಕೃಷ್ಣನಿಂದಾಗಿ ಕರ್ಣನ ಮನಸ್ಸನ್ನು ಕದಡಿಸಿ ಅಷ್ಟಕ್ಕೆ ಬಿಡದೆ ಅವನ ಹೃದಯವನ್ನು ಹತ್ತಿಕ್ಕಿಸುವ ಕಾರ್ಯವನ್ನು ಮಾಡುತ್ತಾನೆ. ಕುಂತಿಯನ್ನು ಅವನಿಗೆ ಭೆಟ್ಟಿಮಾಡಿಸುವ ಮೂಲಕ ಮತ್ತಷ್ಟು ಅವನ ಹೃದಯವನ್ನು ಕದಡುವ ಸಾಹಸವನ್ನು ಕೃಷ್ಣ ಮಾಡಿರುವನು. ಒಂದು ದಿನ ರವಿವಾರ ಸೋರ್ಯನಿಗೆ ಅರ್ಘ್ಯವನ್ನು ಕೊಡಲು ಕರ್ಣನು ಬಂದಾಗ ಕುಂತಿಯು ಗಂಗಾ ತೀರಕ್ಕೆ ಬಂದಿರುತ್ತಾಳೆ. ಸೂರ್ಯನೇ ಸ್ವತಃ ಪ್ರತ್ಯಕ್ಷವಾಗಿ ಆ ಸಂದರ್ಭದ ಘಟನೆಯಲ್ಲಿ ಕರ್ಣನಿಗೆ ಎಚ್ಚರಿಸುತ್ತಾನೆ. ಆದರೆ ದಾನಶೂರನೆನಿಸಿದ ಕರ್ಣನು ತಂದೆಯ ಮಾತನ್ನು ಲೆಕ್ಕಿಸದೆ ತಾಯಿಗೆ ಗೌರವ ತೋರಿಸಿ, ನಿಮ್ಮ ದರ್ಶನದಿಂದ ಜನ್ಮ ಪಾವನವಾಯಿತು ಎಂದು ಹೇಳುತ್ತಾಳೆ.

ಕುರುಪತಿಗಿಲ್ಲ ದೈಬಲಮ್ ಅಜಿಗೆ ಮೇಲ್ಮಲೆಗೆಯ್ವರಾಗುಳುಂ

ತಾಯಿ ನುಡಿಗಳಿಗೆ ಸಿಕ್ಕು ತಾನು ನಡೆಯುವ ನೇರ ದಾರಿಯನ್ನುಳಿದು, ಒಡೆಯನ ಋಣವನ್ನು ಗಮನಿಸದೆ. ಪ್ರಾಪಂಚಿಕ ಸುಖ:ದ ಯಾವ ಆಕರ್ಷಣೆಗಳು ಪ್ರಮುಖವಾಗಿ ಕಂಡು ಬರುವುದಿಲ್ಲ. ಬದಲಾಗಿ ಸ್ವತ: ಕರ್ಣನೆ ಕುಂತಿಗೆ ಈ ರೀತಿಯಾಗಿ ಹೇಳುತ್ತಾನೆ. ಬೆಸ್ತರವನೆನಿಸಿಕೊಂಡಿದ್ದಾಗಲೇ ನಾನು ಸ್ವಲ್ಪವೂ ಗುಣವನ್ನು ಬಿಟ್ಟಿರಲಿಲ್ಲ. ಇನ್ನೂ ನಿಮ್ಮ ಮಗನೆನಿಸಿಕೊಂಡ ಮೇಲೆ ಗುಣವನ್ನು ಬಿಡಲು ಸಾಧ್ಯವೇ ಎನ್ನುವಲ್ಲಿಯೂ ಮನುಷ್ಯತ್ವದ ಗುಣದ ಪ್ರಸ್ತುತತೆಯನ್ನು ಕಾಣುತ್ತೇವೆ. ಕರ್ಣನ ದೃಢ ಮನಸ್ಸನ್ನು ಅವನ ಗಂಭೀರ ಪಾತ್ರ ಹಿತಮಿತ ಮಾತುಗಳು ಸ್ನೇಹ, ಸ್ವಾಮಿ ಭಕ್ತಿಗಳ ಪರಾಕಾಷ್ಠೇ ಸ್ವಾರ್ಥವಿಲ್ಲದ ಎಲ್ಲ ಸೆಳೆತಗಳೊಳಗೆ ಆಹುತಿಯನ್ನಾಗಿ ಮಾಡಿಕೊಳ್ಳುವ ನಿರ್ಧಾರ ಇವೆಲ್ಲವೂ ಕರ್ಣನ ಪಾತ್ರ ತಮ್ಮ ಹೃದಯದಲ್ಲಿ ನೆಲೆನಿಲ್ಲುವಂತೆ ಮಾಡುತ್ತವೆ.

ಕರ್ಣ ಹುಟ್ಟಿನಿಂದ ಹಿಡಿದು ಯುದ್ಧದವರೆಗಿನ ಆತನ ಪಯಣ ಬಹಳಷ್ಟು ಕರುಣಾಜನಕವಾಗಿದೆ.ಅದಕ್ಕಾಗಿಯೇ ದುರಂತ ನಾಯಕನಾದ ಕರ್ಣನ ಬಗ್ಗೆ ಪಂಪ ಈ ಮಾತುಗಳನ್ನು ಹೇಳಿರುವನು.

**ಆಕರ ಗ್ರಂಥಗಳು**

1)ಪಂಪ ಒಂದು ಅಧ್ಯಯನ–ಜಿ.ಎಸ್.ಶಿವರುದ್ರಪ್ಪ

2)ಪಂಪ ಭಾರತ ಒಂದು ಸಾಂಸ್ಕೃತಿಕ ಅಧ್ಯಯನ –ಡಾ. ಶಾಂತಿನಾಥ ದಿಬ್ಬದ

3 ಮಾನವೀಯ ಚಿಂತನೆಗಳು–ಡಾ. ಗುರುಪಾದ ಮರಿಗುದ್ದಿ

4) ಹಳಗನ್ನಡ ಓದುತ್ತ ಓದುತ್ತ ಡಾ. ವಿಜಯಕುಮಾರ ಎಸ್ ಕಟಗಿಹಳ್ಳಿಮಠ.